<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಪಿಸಿಆರ್ ನಂ. 5109-2010

ಸಿಡಬ್ಲೂ - 1

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಮಕೃಷ್ಣ |
| ತಂದೆಯ ಹೆಸರು | : | ಆಂಜಿನೇಯ ಆಚಾರ್ಯ |
| ವಯಸ್ಸು | : | 48 ವರ್ಷ |
| ಕೆಲಸ | : | ರಿಯೇಲ್ ಎಸ್ಟೇಟ್ ಕೆಲಸ |
| ವಾಸ | : | ಬ್ಯಾಟರಾಯನಪುರ, ಬೆಂಗಳೂರು |

<u>ಈ ಸಾಕ್ಷಿಯನ್ನು ದಿನಾಂಕಃ 03-06-2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ದ.ಪ್ರ.ಸಂ. ಕಲಂ 200 ರ ಅಡಿಯಲ್ಲಿ ದಾಖಲಿಸಿಕೊಂಡ ಪಿರ್ಯಾದಿಯ ಪ್ರಮಾಣಿತ ಹೇಳಿಕೆಃ</u>

ನಾನು ಬೆಂಗಳೂರು ಉತ್ತರ ತಾಲೂಕ, ಯಲಹಂಕ ಹೋಬಳಿ, ವಡೇರಪುರ ಗ್ರಾಮದ ಸರ್ವೇ ನಂ.02, 03, 4 ಮತ್ತು 15 ನ್ನು ಪಾರ್ವತಮ್ಮನವರಿಂದ ಖರೀದಿ ಮಾಡಿರುತ್ತೇನೆ. ಆದರೆ ಜಮೀನು ಮೂಲ ಮಾಲೀಕರಾದ ಸೈಯದ್ ಯೂಸಫ್ ರವರ ಹೆಸರಿನಲ್ಲಿ ಇತ್ತು. ಸದರಿ ಯೂಸುಫ್ ತೀರಿಕೊಂಡ ನಂತರ ವಿಭಾಗಕ್ಕೆ ಕೋರಿ ಕೇಸು ದಾಖಲಿಸಿರುತ್ತಾರೆ. ಸದರಿ ಕೇಸ್ ನಂಬರ್ ಓ.ಎಸ್ 40/1981 ರಂತೆ ಇತ್ತು.

ನಂತರ 1989 ರಲ್ಲಿ ಅವರ ಹೆಂಡತಿ, ಮಕ್ಕಳು ರಾಜೀ ಮಾಡಿಕೊಂಡಿರುತ್ತಾರೆ. ಅದರಂತೆ ಆಸ್ತಿಯು ಭಾಗ ಆಗಿರುತ್ತದೆ. ಖಾತೆ ಆಗಿತ್ತು. ಬೌಂಡರಿ ಪಿಕ್ಸ ಆಗಿರಲಿಲ್ಲ. ನಂತರ 1992 ರಲ್ಲಿ ಅವರೆಲ್ಲಾ ಸೇರಿ ಪಾರ್ವತೆಮ್ಮನವರಿಗೆ 2 ಕ್ರಯಪತ್ರಗಳನ್ನು ಬರೆದುಕೊಟ್ಟಿದ್ದರು. ಆ ಕ್ರಯಪತ್ರದ ಪ್ರಕಾರ ಪಾರ್ವತಮ್ಮನವರಿಗೆ ಖಾತೆ ಆಗಿತ್ತು. ನಾನು 2007 ರಲ್ಲಿ ಪಾರ್ವತೆಮ್ಮನವರಿಂದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಖಾತೆ ಪಹಣಿ ನನ್ನ ಹೆಸರಿಗೆ ಆಗಿರುತ್ತದೆ. ಆದರೂ ಸಹ ಆರೋಪಿತರು ಎಸಿ ನ್ಯಾಯಾಲಯದ ಮುಂದೆ ಅಫೀಲು ಹಾಕಿ ನನ್ನ ಖಾತೆಯನ್ನು ಪ್ರಶ್ನಿಸಿದ್ದರು.

ತಂನಂತರ ಆಫೀಲುನ್ನು ವಾಪಸ್ಸು ಪಡೆದಿರುತ್ತಾರೆ. ನನಗೆ ತೊಂದರೆ ಕೊಡಲು ಆರೋಪಿತರು ಸುಳ್ಳು ಪ್ರಮಾಣ ಪತ್ರಗಳನು ಎಸಿ ನ್ಯಾಯಾಲಯದಲ್ಲಿ ಹಾಕಿರುತ್ತಾರೆ. ಆದ್ದರಿಂದ ಆರೋಪಿಯ ಮೇಲೆ ನಾನು ದೂರಿನಲ್ಲಿ ಹೇಳಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ.

ಸಾಕ್ಷಿಯು 2 ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ನಿಸಿ. 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಮ್ಯುಟೇಷನ್ ನ್ನು ಹಾಜರುಪಡಿಸಿದ್ದು ಅದನ್ನು ನಿಸಿ. 3 ಎಂದು ಗುರುತಿಸಲಾಯಿತು. ಆರ್.ಟಿ.ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಸಿ. 4 ಎಂದು ಗುರುತಿಸಲಾಯಿತು. ದೂರುದಾರರ ಕ್ರಯ ಪತ್ರ ಮತ್ತು ತಿದ್ದುಪಡಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ. 5 ಎಂದು ಗುರುತಿಸಲಾಯಿತು. ಅಪೀಲ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 6 ಎಂದು ಗುರುತಿಸಲಾಯಿತು. ದೂರುದಾರರ ತಕರಾರು ಪತ್ರವನ್ನು ಸಲ್ಲಿಸಿದ್ದು ಅದನ್ನು ನಿಸಿ. 7 ಎಂದು, ಆರೋಪಿಗಳ ಮೇಮೋವನ್ನು ಹಾಜರುಪಡಿಸಿದ್ದು ಅದನ್ನು ನಿಸಿ.8 ಎಂದು ಗುರುತಿಸಲಾಯಿತು. ಎಸಿ ನ್ಯಾಯಾಲಯದ ಆದೇಶ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ. 9 ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ಸಮಯವಾವಕಾಶವನ್ನು ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ